# ‘ಅನಗತ್ಯ ವಿವಾದಕ್ಕೆ ತುತ್ತಾಗಿದ್ದೆ

**ಗಗನಾ ಭಾರಿ ಝೀ ಕನ್ನಡ ‘ಡಾನ್ಸ್ ಕರ್ನಾಟಕ ಡಾನ್ಸ್’ ಸ್ಪರ್ಧಿ**



◆ **‘ಭಾರೀ’ ಜನಪ್ರಿಯತೆ ಹೇಗೆ ಸಾಧ್ಯವಾಯಿತು?**

ಈ ಮಟ್ಟಿಗೆ ಜನಪ್ರಿಯತೆ ಸಿಗಬಹುದು ಎಂದು ನಾನು ನಿರೀಕ್ಷೆಯನ್ನು ಮಾಡಿರಲಿಲ್ಲ. ಇದೆಲ್ಲ ದೇವರ ದಯೆ ಎಂದು ಭಾವಿಸುವೆ. ನಾನು ಮಾಡಿರುವುದು ಮಹಾಸಾಧನೆ ಏನೂ ಅಲ್ಲ. ಇದು ನನ್ನ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲ ಎಂದುಕೊಂಡಿದ್ದೇನೆ. ಖಂಡಿತ ನನ್ನ ಬೆಳವಣಿಗೆಗೆ ಇದರಿಂದ ಸಹಾಯ ಆಗುತ್ತದೆ.

◆ **ನಿಮ್ಮ ಪರಿಚಯ ಹೇಳಿ.**

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಸಮೀಪದ ಬಿ.ಜಿ. ಕೆರೆ ನಮ್ಮೂರು. ತಂದೆ ಜಗದೀಶ, ತಾಯಿ ಮೀನಾಕ್ಷಿ. ಅಪ್ಪ ವ್ಯಾಪಾರ ಮಾಡುತ್ತಾರೆ. ನಾವು ನಾಲ್ಕು ಜನ ಮಕ್ಕಳು. ನಾನು ನಾಲ್ಕನೆಯವಳು. ಅಣ್ಣ ಒಬ್ಬ, ಇಬ್ಬರು ಅಕ್ಕಂದಿರು. ಬಳ್ಳಾರಿಯಲ್ಲಿ ನಾನು ಎಂಜಿನಿಯರಿಂಗ್ ಮಾಡಿದೆ. ಕ್ಯಾಂಪಸ್ ಸಂದರ್ಶನದಲ್ಲಿ ಪ್ರತಿಷ್ಠಿತ ನಾಲ್ಕು ಕಂಪನಿಗಳಲ್ಲಿ ಉದ್ಯೋಗ ಅವಕಾಶ ಸಿಕ್ಕಿದ್ದವು. ನಾನು ವಿಪ್ರೊ ಆಯ್ಕೆ ಮಾಡಿಕೊಂಡು, ಎರಡು ವರ್ಷ ಕೆಲಸ ಮಾಡಿದೆ. ‘ಮಹಾನಟಿ’ಗೆ ಮೊದಲ ಬಾರಿಗೆ ಆಡಿಷನ್ ಕೊಟ್ಟೆ. ಮೊದಲ ಪ್ರಯತ್ನದಲ್ಲೇ ಆಯ್ಕೆಯಾದೆ. ಅಲ್ಲಿಂದ ನನ್ನ ಬಣ್ಣದ ಲೋಕ ಆರಂಭವಾಗಿದೆ. ಈಗ ಇದನ್ನೇ ಮುಂದುವರಿಸಿದ್ದೇನೆ.

◆ **ಡಾನ್ಸ್ ಕಲಿತಿದ್ದೀರಾ?**

ಡಾನ್ಸ್ ಗೊತ್ತಿಲ್ಲ. ಗೊತ್ತಿಲ್ಲದೆ ಇರುವುದೇ ನನ್ನ ಕಂಟೆಂಟ್ ಎನ್ನಬಹುದು. ನಮ್ಮೂರಲ್ಲಿ ಡಾನ್ಸ್ ಕಲಿಯುವ ಅವಕಾಶ ಇರಲಿಲ್ಲ. ಅಮ್ಮ ಅಕ್ಕನನ್ನು ಡಾನ್ಸ್‌ಗೆ ಸೇರಿಸಿದ್ದರು. ಆಕೆ ಚಳ್ಳಕೆರೆಗೆ ಡಾನ್ಸ್ ಕ್ಲಾಸ್‌ಗೆ ಹೋಗುತ್ತಿದ್ದಳು. ದೂರ ಆಗುತ್ತಿದ್ದರಿಂದ ಅವಳು ಅರ್ಧಕ್ಕೆ ಬಿಟ್ಟಳು. ಹಾಗಾಗಿ ನನಗೆ ಡಾನ್ಸ್ ಕಲಿಯುವ ಅವಕಾಶ ಸಿಗಲೇ ಇಲ್ಲ. ಕಲಿಯಬೇಕು ಎಂಬ ಬಯಕೆ ಇತ್ತು. ಆದರೆ ಕಲಿಯಲು ಸಾಧ್ಯ ಆಗಲಿಲ್ಲ. ಈಗ ನಿಜಕ್ಕೂ ಕಷ್ಟ ಆಗುತ್ತಿದೆ. ಪೂರ್ವ ತರಬೇತಿಯಿಲ್ಲದೆ, ಕಲಿಯುತ್ತಲೇ ಸ್ಪರ್ಧೆಯನ್ನೂ ಮಾಡುತ್ತಿದ್ದೇನೆ. ನಿಜಕ್ಕೂ ಇದು ಸವಾಲಿನ ಕೆಲಸ.

◆ **ಕಂಪ್ಯೂಟರ್ ಮುಂದೆ ಕುಳಿತವರು ಜನರ ನಡುವೆ ನಿಂತಿದ್ದೀರಿ. ಇದನ್ನು ಹೇಗೆ ಅನುಭವಿಸುತ್ತಿದ್ದೀರಿ?**

ಸಾಫ್ಟ್‌ವೇರ್ ಕೆಲಸ ಮಾಡುತ್ತಿದ್ದವಳಿಗೆ ‘ಮಹಾನಟಿ’ ಹೊಸ ಅನುಭವ. ಆರಂಭದಲ್ಲಿ ಒಂದಿಷ್ಟು ವಿವಾದಕ್ಕೆ ಒಳಗಾಗಬೇಕಾದ ಸಂದರ್ಭ ಎದುರಾಯಿತು. ಯಾರಿಗೂ ಅವಹೇಳನ ಮಾಡುವ ದುರುದ್ದೇಶ ಇಲ್ಲದೆ ನಿರ್ದಿಷ್ಟ ಒಂದು ಉದ್ಯೋಗವನ್ನು ಟೀಕಿಸಿದೆ ಎನ್ನುವಂತೆ ಆಯಿತು. ಅದೂ ಅನಿರೀಕ್ಷಿತವೇ ಆಗಿತ್ತು. ನಂತರ ನೆಮ್ಮದಿಯಿಂದ ಕೆಲಸ ಮಾಡುತ್ತಾ ಆರಾಮಾಗಿ ಇದ್ದೆ. ಇದೆಲ್ಲ ಬೇಕಿತ್ತಾ ಎಂದೂ ಆ ಸಂದರ್ಭದಲ್ಲಿ ಅನಿಸಿತ್ತು. ಆದರೆ ಸಮಾಜದಲ್ಲಿ ಜನರು ಗುರುತಿಸಿ ಪ್ರೋತ್ಸಾಹದ ಮಾತುಗಳನ್ನು ಹೇಳುತ್ತಿದ್ದರು. ಜನರ ಪ್ರೀತಿಯಿಂದ ಸಿಗುತ್ತಿದ್ದ ಸಂತೋಷ ಅದೆಲ್ಲವನ್ನೂ ಮರೆಸಿತು. ಮಾತ್ರವಲ್ಲ, ಇದನ್ನೇ ಮುಂದುವರಿಸಬೇಕು ಎನ್ನುವ ಉಮೇದನ್ನೂ ಹುಟ್ಟಿಸಿತು. ಯಾವುದೇ ಕ್ಷೇತ್ರದಲ್ಲಿ ಆದರೂ ಪಾಸಿಟಿವ್–ನೆಗೆಟಿವ್ ಇದ್ದೇ ಇರುತ್ತದೆ. ಏನೇ ಇದ್ದರೂ ಅದೆಲ್ಲವನ್ನೂ ಸರಿದೂಗಿಸಿಕೊಂಡು ಹೋಗಬೇಕು ಎನ್ನುವುದು ಗೊತ್ತಾಯಿತು.

ಸಾಫ್ಟ್‌ವೇರ್‌ನಲ್ಲಿ ಇದ್ದಾಗ ವಾರಂತ್ಯದ ರಜೆ ಸಿಗುತ್ತಿತ್ತು. ಈಗ ಸಮಯ ಯಾವಾಗ ಸಿಗುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ಹಾಗಾಗಿ ನನಗೆ ನಾನು ಸಮಯವನ್ನು ಕೊಡಲು ಆಗುವುದಿಲ್ಲ. ಹಾಗೆಯೇ ಪೋಷಕರಿಗೂ ಸಮಯ ಕೊಡಲು ಆಗುವುದಿಲ್ಲ. ಸಮಯ ಮತ್ತು ಸಂದರ್ಭ ಹೇಗೆ ಬರುತ್ತದೆಯೋ ಅದನ್ನೇ ಸ್ವೀಕರಿಸುತ್ತೇನೆ. ನಾನು ‘ಮಹಾನಟಿ’ಗೆ ಬರುತ್ತೇನೆ ಎಂದು ಅಂದುಕೊಂಡಿರಲಿಲ್ಲ. ನಟನೆ ಗೊತ್ತಿಲ್ಲದೆ ಈ ಕ್ಷೇತ್ರಕ್ಕೆ ಬಂದೆ. ಇಲ್ಲಿಗೆ ಬಂದ ಮೇಲೆ ಕೆಲಸಕ್ಕೆ ರಾಜೀನಾಮೆ ನೀಡಿದೆ. ಡಿಕೆಡಿ ಇರುವ ತನಕ ಅದನ್ನು ಮಾಡುತ್ತೇನೆ ಅದು ಮುಗಿದ ಮೇಲೆ ಉದ್ಯೋಗವನ್ನು ಮಾಡುತ್ತೇನೆ. ಇದೂ ಸಿಗುತ್ತದೆ ಎಂದು ಅನ್ನಿಸಿರಲಿಲ್ಲ. ಒಂದು ರಿಯಾಲಿಟಿ ಶೋ ಮುಗಿದ ಮರು ದಿನವೇ ಇದು ಆರಂಭವಾಯಿತು. ‘ಮಹಾನಟಿ’ ಮುಂದೆ ಏನು ಅಂದರೆ, ಐಟಿ ಕ್ಷೇತ್ರಕ್ಕೆ ಹೋಗುವುದು ಎಂದುಕೊಂಡಿದೆ. ಸದ್ಯ ಈಗಲೂ ಹಾಗೇ ಅಂದುಕೊಂಡಿದ್ದೇನೆ. ಮುಂದೆ ನೋಡೋಣ.

◆ **ಸಿನಿಮಾಕ್ಕೆ ಅವಕಾಶ ಬಂದರೆ ಅಥವಾ ಕಥೆ ಬರೆಯುವ ಸಂದರ್ಭ ಎದುರಾದರೆ...**

ಅದು ದೂರದ ಮಾತು. ಬಂದ ನಂತರವೇ ನೋಡೋಣ. ಅಷ್ಟಕ್ಕೂ ಬಂದರೆ ನಮ್ಮ ಕುಟುಂಬದ ಸಲಹೆ ತೆಗೆದುಕೊಂಡು ಮುಂದುವರಿಯುತ್ತೇನೆ. ಇದಕ್ಕೆಲ್ಲ ನನ್ನ ಅಕ್ಕನ ಸಹಾಯ ಪಡೆಯುತ್ತೇನೆ. ನನ್ನ ದೃಷ್ಟಿಯಲ್ಲಿ ಸಿನಿಮಾಕ್ಕೆ ಕಥೆ ಮುಖ್ಯ ಆಗುತ್ತದೆ.

ನಾನೇ ಕಥೆ ಬರೆಯಬೇಕು ಅಂದರೆ, ನನಗೆ ಅಷ್ಟು ಸಾಮರ್ಥ್ಯ ಇದೆಯೇ ಎನ್ನುವುದನ್ನು ನೋಡಬೇಕು. ನಟನೆ ಬಗ್ಗೆ ಗೊತ್ತಿರಲಿಲ್ಲ. ಆದರೂ ‘ಮಹಾನಟಿ’ಗೆ ಬಂದೆ. ಡಿಕೆಡಿಗೂ ಅಷ್ಟೇ. ಅಂತಹ ಸಂದರ್ಭ ಬಂದರೆ ಬರೆಯಬಹುದೇನೋ ಗೊತ್ತಿಲ್ಲ.

■ **ರಾಘವೇಂದ್ರ ಕೆ.**